**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ**

**ಸಿಸಿ ನಂಬ್ರ:8/2018**
**ಸಿಡಬ್ಲ್ಯೂ - 1 ಪಿಡಬ್ಲ್ಯೂ - 1**

ದಿನಾಂಕ: 03-10-2023

| | | |
|---|---|---|
| ಸಾಕ್ಷಿದಾರರ ಹೆಸರು | : | ಪವನ್ ಚಂದ್ರ |
| ತಂದೆಯ ಹೆಸರು | : | ಗೋಪಾಲ |
| ಪ್ರಾಯ | : | 30 ವರ್ಷ |
| ಉದ್ಯೋಗ | : | ಇಲೆಕ್ಟ್ರೀಶಿಯನ್ |
| ವಾಸ | : | ಅಂಕದಕಟ್ಟೆ |

ಸಾಕ್ಷಿಗೆ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿ:28-09-2017 ರಂದು ನಾನು ನನ್ನ ಮೋಟಾರುಸೈಕಲಿನಲ್ಲಿ ನನ್ನ ಸ್ನೇಹಿತ ಹರೀಶನೊಂದಿಗೆ ಕೊಲ್ಲೂರು ಮುಕಾಂಬಿಕಾ ದೇವಸ್ಥಾನಕ್ಕೆ ಹೋಗುತಿದ್ದಾಗ ಇಡೂರು ಕುಂಜ್ಞಾಡಿ ಬಳಿ ಬರುತಿದ್ದಾಗ ಒಂದು ಬಸ್ಸು ನಮ್ಮನ್ನು ಓವರ್ಟೇಕ್ ಮಾಡಿಕೊಂಡು ಮುಂದಕ್ಕೆ ಹೋಯಿತು. ಅದು ಕುಂದಾಪುರದಿಂದ ಕೊಲ್ಲೂರು ಕಡೆಗೆ ಹೋಗುತಿತ್ತು. ಮುಂದುಗಡೆಯಿಂದ ಬರುತಿದ್ದ ಮೋಟಾರುಸೈಕಲಿಗೆ ನಮ್ಮನ್ನು ಓವರ್ಟೇಕ್ ಮಾಡಿಕೊಂಡು ಮುಂದಕ್ಕೆ ಹೋದ ಬಸ್ಸು ಡಿಕ್ಕಿ ಹೊಡೆಯಿತು. ನಾವು ಹತ್ತಿರ ಹೋಗಿ ನೋಡಿದಾಗ ಬೈಕ್ ಸವಾರನ್ನು ಕೆಳಗೆ ಬಿದ್ದಿದ್ದು ಜ್ಞಾನ ತಪ್ಪಿತ್ತು. ಅವರಿಗೆ ಎದೆ ಹತ್ತಿರ ಗಾಯವಾಗಿತ್ತು. ಕಾಲಿನಲ್ಲಿ ತರಚಿದ ಗಾಯವಾಗಿತ್ತು. ಬೈಕ್ ಸವಾರ ಹೆಲ್ಮೆಟನ್ನು ಧರಿಸಿದ್ದರು . ಸದರಿ ಬೈಕ್ ಸವಾರರು ನಮ್ಮ ಊರಿನವರು. ನಂತರ ಕೊಲ್ಲೂರು ಪೊಲೀಸರು ಸ್ಥಳಕ್ಕೆ ಬಂದರು. ಸದರಿ ಬೈಕ್ ಸವಾರರನ್ನು ಆಂಬುಲೆನ್ಸಿನಲ್ಲಿ ಪೊಲೀಸರು ಆಸ್ಪತ್ರೆಗೆ ಕರೆದುಕೊಂಡು ಹೋದರು. ಬಸ್ಸು ಚಾಲಕ ಘಟನಾ ಸ್ಥಳದಲ್ಲಿ ಇದ್ದರು. ಸಾಕ್ಷಿಗೆ ಈ ಹಂತದಲ್ಲಿ ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿಯನ್ನು ತೋರಿಸಲಾಗಿ ಸಾಕ್ಷಿಯು ಆತನೇ ಸದರಿ ಘಟನೆ ದಿನ ಬಸ್ಸು ಚಾಲನೆ ಮಾಡುತಿದ್ದ ಚಾಲಕ ಎಂದು ಗುರುತಿಸಿರುತ್ತಾರೆ. ಬಸ್ಸು ಚಾಲಕನ ಹೆಸರು ಜಗದೀಶ್ ಆಗಿರುತ್ತದೆ. ಸದರಿ ಬಸ್ಸಿನ ಸಂಖ್ಯೆ ನನಗೆ ನೆನಪಿಲ್ಲ. ಮೃತ ವ್ಯಕ್ತಿಯು ನಡೆಸುತಿದ್ದ ಮೋಟಾರು ಸೈಕಲಿನ ಸಂಖ್ಯೆಯು ನನಗೆ ನೆನಪಿಲ್ಲ. ಸದರಿ ಅಪಘಾತಕ್ಕೆ ಬಸ್ಸಿನ ಚಾಲಕನೇ ಕಾರಣನಾಗಿದ್ದು ಬಲಗಡೆಯಿಂದ ಓವರ್ಟೇಕ್ ಮಾಡಿ ಈ ಅಪಘಾತ ಮಾಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ತಾನು ಸಸದರಿ ಘಟನೆಗೆ ಸಂಬಂಧಿಸಿದಂತೆ ನೀಡಿದ ದೂರು ಆಗಿರುತ್ತದೆ ಎಂದು ನುಡಿದಿದ್ದು ಸದರಿ ದಾಖಲೆಯನ್ನು ನಿಪಿ-1 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿದ್ದ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಘಟನೆ ನಡೆದ ದಿನ ತಕ್ಷೀರು ಸ್ಥಳದಲ್ಲಿ ಮಾಡಿದ ಸ್ಥಳ ಪಂಚನಾಮೆ ಎಂದು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಅದರಲ್ಲಿದ್ದ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಘಟನೆ ದಿನ ಘಟನಾ ಸ್ಥಳದಲ್ಲಿ ಪೊಲೀಸರು ತೆಗೆದಿರುವ ಫೋಟೋ ಎಂದು

ನುಡಿದಿರುತ್ತಾರೆ. ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

**<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಪಿ.ಕೆ. ರವರಿಂದ</u>**

ನನ್ನ ಮನೆ ಕುಂದಾಪುರ ತಾಲೂಕಿನ ಕೋಟೇಶ್ವರ . ನನ್ನ ಚಾಲನಾ ಪರವಾನಿಗೆಯನ್ನು ಘಟನಾ ದಿನ ಪೊಲೀಸರು ಕೇಳಿಲ್ಲ. ಸದರಿ ಘಟನೆ ದಿನ ನಾನು ಯಾವುದೇ ಮೋಟಾರುಸೈಕಲನ್ನು ಚಲಾಯಿಸುತ್ತಿರಲಿಲ್ಲ ಮತ್ತು ನಾನು ಘಟನಾ ಸ್ತಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಕುಂದಾಪುರದಿಂದ ಕೊಲ್ಲೂರು ಕಡೆಗೆ ಹೋಗುತಿದ್ದಾಗ ನನ್ನನ್ನು ಓವರ್ಟೇಕ್ ಮಾಡಿಕೊಂಡು ಬಸ್ಸು ಮುಂಕ್ಕೆ ಹೋಯಿತು. ನನ್ನ ಮುಂದೆ ಬಸ್ಸು ಇತ್ತು ನನಗೆ ಬಸ್ಸಿನ ಮುಂದಿನ ಭಾಗ ಕಾಣಿಸುತ್ತಿರಲಿಲ್ಲ ಎಂದರೆ ಸರಿ . ಘಟನಾ ಸ್ತಳದಲ್ಲಿ ಸದರಿ ರಸ್ತೆಯಲ್ಲಿ ಸಂಚರಿಸುತಿದ್ದವರು ಅಲ್ಲಿ ಸೇರಿದ್ದರು. ನನಗೆ ಘಟನಾ ದಿನ ಸ್ತಳಕ್ಕೆ ಬಂದ ಪೊಲೀಸರ ಹೆಸರು ಗೊತ್ತಿಲ್ಲ. ಇಬ್ಬರು ಪೊಲೀಸರು ಬಂದಿದ್ದರು. ನಿಪಿ-2 ಮಹಜರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು. ಮಹಜರಿನಲ್ಲಿ ಏನು ಬರೆದಿದೆ ಎಂದು ನಿಮಗೆ ಗೊತ್ತಿಲ್ಲ ಪೊಲೀಸರ ಹೇಳಿಕೆಯ ಮೇರೆಗೆ ನೀವು ಸಹಿಯನ್ನು ಹಾಕಿದ್ದೀರಾ ಎಂದರೆ ಸರಿಯಲ್ಲ. ಘಟನಾ ಪೂರ್ವದಲ್ಲಿ ನನಗೆ ಆರೋಪಿಯ ಪರಿಚಯವಿರಲಿಲ್ಲ.

ಘಟನೆ ದಿನ ಆರೋಪಿಯು ಸ್ತಳದಲ್ಲಿಯೇ ಇದ್ದರು. ಘಟನೆಗೆ ಸಂಬಂಧಪಟ್ಟಂತೆ ಪೊಲೀಸು ಠಾಣೆಗೆ ಎಷ್ಟು ಬಾರಿ ಭೇಟಿ ನೀಡಿದ್ದೀರಾ ಎಂದರೆ ಸಾಕ್ಷಿಯು ಘಟನೆ ದಿನ ದೂರು ನೀಡಲು ರಾತ್ರಿ ಹೋಗಿದ್ದೆ ಎಂದು ನುಡಿದಿರುತ್ತಾರೆ. ಮಹಜರು ಹಾಗೂ ನಕ್ಷೆಯನ್ನು ಪೊಲೀಸರು ಠಾಣೆಯಲ್ಲಿ ಮಾಡಿದ್ದು ಎಂದರೆ ಸರಿಯಲ್ಲ. ಮಹಜರು ಹಾಗೂ ನಕ್ಷೆ ಹಾಗೂ ಘಟನಾ ಸ್ತಳಕ್ಕೆ ತಾಳೆ ಬರುವುದಿಲ್ಲ ಎಂದರೆ ಸಾಕ್ಷಿಯು ಎಲ್ಲವೂ ಸರಿ ಇದೆ ಎಂದು ನುಡಿದಿರುತ್ತಾರೆ. ನಿಪಿ-3 ಘಟನಾ ಸ್ತಳದ ಛಾಯಾ ಚಿತ್ರವಲ್ಲ ಎಂದರೆ ಸಾಕ್ಷಿಯು ಸದರಿ ಸ್ತಳದಲ್ಲೇ ಘಟನೆ ನಡೆದಿರುವುದು ಎಂದು ನುಡಿದಿರುತ್ತಾರೆ. ಮೃತವ್ಯಕ್ತಿಯು ಮೋಟಾರುಸೈಕಲನ್ನು ಅಡ್ಡಾದಿಡ್ಡಿಯಾಗಿ ರಸೆಸ್ತಯ ಬಲಬದಿಗೆ ಚಲಾಯಿಸಿಕೊಂಡು ಬಂದು ಈ ಅಪಘಾತವನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಘಟನಾ ದಿನ ಆರೋಪಿಯು ಘಟನಾ ಸ್ತಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ ಸದರಿ ಘಟನಾ ದಿನ ಆರೋಪಿಯು ಯಾವುದೇ ಬಸ್ಸನ್ನು ಚಾಲನೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತವ್ಯಕ್ತಿಯ ಮನೆಯವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಂಶಗಳು ಸುಳ್ಳು ಆ ದಿನ ಅಂತಹ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ನನಗೆ ಘಟನೆ ಬಗ್ಗೆ ಯಾವುದೇ ವಿಚಾರ ತಿಳಿದಿಲ್ಲ ಎಂದರೆ ಸರಿಯಲ್ಲ. ನಾನು ಕೊಲ್ಲೂರು ಪೊಲೀಸರ ಹೇಳಿಕೆಯ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ.